# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಜಗದೇವ್ ಗುತ್ತೇದಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 83 (800) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 19-08-2025 |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; | ಹೌದು.<br>2021-22ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯ ಘೋಷಣೆಯಲ್ಲಿ ದೇಶಾದ್ಯಂತ 07 Prime Minister Mega integrated Textile Region and Apparel Park (PM-MITRA) ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಘೋಷಿಸಲಾಗಿರುತ್ತದೆ. |
| ಆ) | ಜವಳಿ ಪಾರ್ಕ್ ಯಾವಾಗ ಪ್ರಾರಂಭಿಸಲಾಗುವುದು; ಹಾಗೂ ಯಾವಾಗ ಮುಕ್ತಾಯಗೊಳಿಸಲಾಗುವುದು; | ಈಗಾಗಲೇ PM-MITRA Park Karnataka Ltd ಎಂಬ ಎಸ್.ಪಿ.ವಿ. ಅನ್ನು ದಿನಾಂಕ:27-03-2024 ರಂದು ನೋಂದಾಯಿಸಲಾಗಿರುತ್ತದೆ. ಸದರಿ ಜವಳಿ ಪಾರ್ಕ್‌ನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ DBFOT (Design, Build, Finance, Operate and Transfer) ಮಾದರಿಯಲ್ಲಿ ಸ್ಥಾಪಿಸಲು Master Developer ಆಯ್ಕೆಗಾಗಿ ಸಿದ್ಧಪಡಿಸಿರುವ RFP (Request for Proposal) ಮತ್ತು DCA (Draft Concession Agreement) ಗಳನ್ನು ರಾಜ್ಯ ಕಾನೂನು ಇಲಾಖೆಯ ಅನುಮೋದನೆಯೊಂದಿಗೆ ಜವಳಿ ಮಂತ್ರಾಲಯ, ಭಾರತ ಸರ್ಕಾರ, National Industrial Corridor Development Corporation (NICDC) ನಿಗಮಕ್ಕೆ ದಿನಾಂಕ:11-07-2025 ರಂದು ಸಲ್ಲಿಸಲಾಗಿದೆ. NICDC ಮೂಲಕ ಕೇಂದ್ರ PPPAC ಸಮಿತಿ ಸಭೆಯ ಅನುಮೋದನೆಗೆ ಬಾಕಿ ಇರುತ್ತದೆ. ರಾಜ್ಯ Environmental Clearance (EC) ಪಡೆಯುವ ಕುರಿತು ಈಗಾಗಲೇ ಪರವೇಶ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, ಅನುಮೋದನೆಗೆ ಬಾಕಿ ಇರುತ್ತದೆ. ಕೇಂದ್ರ ಸರ್ಕಾರದಿಂದ ಅನುಮೋದನೆಯಾದ ನಂತರ ಮುಂದಿನ ಕ್ರಮಕೈಗೊಳ್ಳಬೇಕಾಗಿದೆ. |
| ಇ) | ಜವಳಿ ಪಾರ್ಕ್ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು; ಹಾಗೂ ಇದುವರೆಗೆ ಅದಕ್ಕೆ ಮೀಸಲಿಟ್ಟಿರುವ ಮೊತ್ತವೆಷ್ಟು; | ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್ ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು ದಿನಾಂಕ:17-09-2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿ, ಸರ್ಕಾರದ ಆದೇಶ ಸಂಖ್ಯೆ: CI 170 JAKE 2019 (P-5), ದಿನಾಂಕ:03-10-2024 ರಲ್ಲಿ ಮಂಜೂರಾತಿಯನ್ನು ನೀಡಿದೆ. |

...2

| | | |
|---|---|---|
| | | PM-MITRA ಪಾರ್ಕ್‌ನ್ನು ಅನುಷ್ಠಾನಗೊಳಿಸಲು ಯೋಜನಾ ಮೊತ್ತ ರೂ.1826.00 ಕೋಟಿಗಳನ್ನು ಅಂದಾಜಿಸಲಾಗಿರುತ್ತದೆ. ಸದರಿ ಮೊತ್ತವನ್ನು Master Developer ರವರು ಹೂಡಿಕೆ ಮಾಡಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಿದ ನಂತರ ಕೇಂದ್ರ ಸರ್ಕಾರದಿಂದ ರೂ.500.00 ಕೋಟಿಗಳನ್ನು (ರೂ.300.00+200.00 ಕೋಟಿಗಳು) 02 ಹಂತಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುದಾನ ಒದಗಿಸಲಾಗುವುದು. |
| ಈ) | ಜವಳಿ ಪಾರ್ಕ್ ನಿರ್ಮಾಣಕ್ಕಾಗಿ ಜಾಗವನ್ನು ಮೀಸಲಾಗಿಟ್ಟಿದೆಯೇ; ಇಟ್ಟಿದ್ದರೆ ಎಷ್ಟು ಜಾಗವನ್ನು ಮೀಸಲಾಗಿಟ್ಟಿದೆ; | ಕಲಬುರಗಿ ಜಿಲ್ಲೆಯ, ಕಲಬುರಗಿ ತಾಲ್ಲೂಕಿನ ನದಿಸಿನ್ನೂರು ಹಾಗೂ ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು 1000 ಎಕರೆ ಜಮೀನನ್ನು ರಾಜ್ಯ ಸರ್ಕಾರವು PM-MITRA Park Karnataka Ltd ಎಸ್.ಪಿ.ವಿಗೆ ಸಾಂಕೇತಿಕ ದರದಲ್ಲಿ 99 ವರ್ಷಗಳ ಅವಧಿಗೆ ದಿನಾಂಕ:22.10.2024 ರಂದು ಹಸ್ತಾಂತರಿಸಲಾಗಿರುತ್ತದೆ. |
| ಉ) | ಜವಳಿ ಪಾರ್ಕ್ ನಿರ್ಮಾಣಕ್ಕೆ ಕೇಂದ್ರದಿಂದ ದೊರೆಯಬೇಕಾದ ಸೌಲಭ್ಯಗಳಿಗಾಗಿ ಹಾಗೂ ಅನುಮೋದನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಈಗಾಗಲೇ PM-MITRA Park Karnataka Ltd ಎಂಬ ಎಸ್.ಪಿ.ವಿ. ಅನ್ನು ದಿನಾಂಕ:27–03–2024 ರಂದು ನೋಂದಾಯಿಸಲಾಗಿರುತ್ತದೆ. ಸದರಿ ಜವಳಿ ಪಾರ್ಕ್‌ನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ DBFOT (Design, Build, Finance, Operate and Transfer) ಮಾದರಿಯಲ್ಲಿ ಸ್ಥಾಪಿಸಲು Master Developer ಆಯ್ಕೆಗಾಗಿ ಸಿದ್ಧಪಡಿಸಿರುವ RFP (Request for Proposal) ಮತ್ತು DCA (Draft Concession Agreement) ಗಳನ್ನು ರಾಜ್ಯ ಕಾನೂನು ಇಲಾಖೆಯ ಅನುಮೋದನೆಯೊಂದಿಗೆ ಜವಳಿ ಮಂತ್ರಾಲಯ, ಭಾರತ ಸರ್ಕಾರ, National Industrial Corridor Development Corporation (NICDC) ನಿಗಮಕ್ಕೆ ದಿನಾಂಕ:11–07–2025 ರಂದು ಸಲ್ಲಿಸಲಾಗಿದೆ. NICDC ಮೂಲಕ ಕೇಂದ್ರ PPPAC ಸಮಿತಿ ಸಭೆಯ ಅನುಮೋದನೆಗೆ ಬಾಕಿ ಇರುತ್ತದೆ. ರಾಜ್ಯ Environmental Clearance (EC) ಪಡೆಯುವ ಕುರಿತು ಈಗಾಗಲೇ ಪರವೇಶ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, ಅನುಮೋದನೆಗೆ ಬಾಕಿ ಇರುತ್ತದೆ. ಕೇಂದ್ರ ಸರ್ಕಾರದಿಂದ ಅನುಮೋದನೆಯಾದ ನಂತರ ಮುಂದಿನ ಕ್ರಮಕೈಗೊಳ್ಳಬೇಕಾಗಿದೆ. |

**ಸಂಖ್ಯೆ: CI 180 JAKE 2025**

(ಶಿವಾನಂದ ಎಸ್. ಪಾಟೀಲ)

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು